

ಇರಲಿ ಬಿಡು ಎಂದು ಸುಮ್ಮನೆ ಬಿಟ್ಟೆ ನಾನು
ಒಬ್ಬನೇ ಹಾಯಾಗಿ ಮಲಗಲಿ ಎಂದು

ಮಲಗುವುದಿಲ್ಲ ನೀನು ಒಬ್ಬನೇ ಹೀಗೆ ಯಾವತ್ತೂ

ಎದೆಗೊರಗಿ ಮಲಗಿರುವೆ ಈವತ್ತು
'ಜಗದೆಲ್ಲಾ ಶಬ್ದಗಳ ಸಂತೆ ನಿನ್ನ ಹೃದಯ' ಅಂದೆ ನೀನು,
ತುಸು ತಡೆದು ನಾನಂದೆ, 'ನೀನು ಒಬ್ಬನೇ ಮಲಗಿರುವಾಗ
ಕುಡಿದವರಂತೆ ಕನವರಿಸುವುದನ್ನು ಮಾತ್ರ
ಕೇಳಿಸಿಕೊಳ್ಳಬಾರದು, ನಾನು ಮತ್ತೆಂದೂ'



ಮತ್ತೊಂದು ಪ್ರಸಂಗ ತೇಜಶ್ರೀ ಅವರ 'ಕ್ಯಾಪ್ಟನ್ ಕವಿತೆಗಳು' ಸಂಕಲನದ ಕವಿತೆಗಳ ಓದಿನ ಸಂದರ್ಭದ್ದು. ಸಂಕಲನದ '10' ಪದ್ಯ ಓದುವಾಗ ಕೆಳಗಿನ ಸಾಲುಗಳು ಥಟ್ಟನೆ ಏನನ್ನೋ ಹೊಳೆಯಿಸಿದವು.

'ಆಗೆಲ್ಲ ನಿನ್ನ ಕೆನ್ನೆಗೆ ನೀಡಬೇಕೆಂದಿದ್ದ ಮುತ್ತನ್ನು
ನೀಡಲಾಗಲೇ ಇಲ್ಲ, ಎಂದೂ.
ಒಂದೊಂದೇ ಚೆರ್ರಿ ಹಣ್ಣನ್ನು
ನಾಜೂಕು ಹಿಡಿದು ನನ್ನ ಬೆರಳುಗಳಲ್ಲಿ
ಮುತ್ತಿಕ್ಕಿ ಮುದ್ದಿಸಿ ಮುದ್ದಿಸಿ ತಿನ್ನುತ್ತಿದ್ದೆ
ನಿನ್ನ ಕೆನ್ನೆಯೆಂದೇ ತಿಳಿದು!'

ಇದು ತಂದೆಯ ಕುರಿತಾಗಿ ಮಗಳು ಬರೆದ ಪದ್ಯ. ಇದನ್ನು ಓದಿದ ರಾತ್ರಿ ನಾನು ಊಟ ತರಲೆಂದು ಡಾಬಾಕ್ಕೆ ಹೋಗಿದ್ದೆ. ಅಲ್ಲಿಯೇ ಕುಳಿತು, 'ಮಗಳು' ಎನ್ನುವ ಪದ್ಯ ಬರೆದೆ. ತಂದೆಯೊಬ್ಬ ಮಗಳನ್ನು ಕುರಿತು ಬರೆದ ಪದ್ಯ ಇದು. ಈ ಪದ್ಯ ಬರೆದಾದ ಮೇಲೆ, 'ಕ್ಯಾಪ್ಟನ್ 10 ಓದಿ' ಎನ್ನುವ ಅಡಿ ಟಿಪ್ಪಣಿ ಕೊಟ್ಟಿದ್ದೆ. ಗೆಳೆಯ ಆರಿಫ್ ರಾಜಾ, 'ಇದು ಸ್ವತಂತ್ರ ಪದ್ಯವೇ ಆಗಿರುವದರಿಂದ ಅಲ್ಲೇಕೆ ಇನ್ನೊಂದು ಪದ್ಯವನ್ನು ನೆನಪಿಸುತ್ತೀರಿ?' ಎಂದು, 'ಮಗಳು' ಎನ್ನುವ ತಲೆಬರಹವನ್ನು ಸೂಚಿಸಿದರು. ಆ ಕವಿತೆ:

ಮಗಳು
ನಾನು ಹೊರಗೆ ಹೋದಾಗ ಯಾವಾಗಲು
ತಪ್ಪದೆ ತರದೇ ಇರೆನು
ಚಿಕನ್ ಲಾಲಿಪಪ್ಪನು
ಹತ್ತು ವರುಷದ ಮಗಳಿಗೆ
ಅದನ್ನು ಅವಳು ಚೀಪುತ್ತ ಸೀದು ಸೀದು
ತಿನ್ನುವುದ ನೋಡಿದರೆ ಅವರಮ್ಮನಂತೆ
ಖುಷಿಯೋ ಖುಷಿ!



ಅವಳು ಮಾಡಲು ಯಾವುದೇ ಸಣ್ಣ ಸಣ್ಣ ಕೆಲಸವನು
ಇನಾಮು ಬೇಡುವಳು

